ಅಯ್ಯೋ ಎಂದು ಬೇಸರ ಉಂಟಾಯಿತು. ಮರುಕ್ಷಣವೇ ಅವನೂ ಜೊತೆಗೆ ಬಂದರೆ ಎನ್ನುವ ಆಲೋಚನೆ ಹೊಳೆದು ರೋಮಾಂಚನವಾಯಿತು. ಅದರ ಬಗ್ಗೆ ಚಿಂತಿಸಿದಷ್ಟು ಆಲೋಚನೆ ಎಂತಹ ಅದ್ಭುತ ರಮ್ಯ ಅನ್ನಿಸತೊಡಗಿತು.

ಅಂದೇ ಸಂಜೆ ಹೋದೆ ಅವನ ಮನೆಗೆ. ಬಾಗಿಲು ತೆರೆದಿತ್ತು. ಮೆಲ್ಲನೆ ಒಳಗೆ ಹೋದೆ. ಫೋನಿನಲ್ಲಿ ಯಾರ ಜೊತೆಗೋ ಮಾತಾಡುತ್ತಿದ್ದ. ಮಾತು ಮುಗಿಸಿ ಹತ್ತಿರ ಬಂದ. ಮೊದಲು ಇಬ್ಬರೂ ಮುಗುಳ್ನಕ್ಕೆವು. ನಂತರ ಒಟ್ಟಿಗೆ ಮಾತು ಆರಂಭಿಸಿದೆವು. ಮತ್ತೆ ನಕ್ಕು 'ನೀವೇ ಹೇಳಿ' ಎಂದ ಅವನು.

'ನಾಡಿದ್ದು ಮಡಿಕೇರಿಯಲ್ಲಿ ಸಮ್ಮೇಳನ ಇದೆ. ನಾನು ವರದಿ ಮಾಡಬೇಕು.' ಅಲ್ಲಿಗೇ ನಿಲ್ಲಿಸಿದೆ. ಒಂದು ನಿಮಿಷ ತಲೆ ತಗ್ಗಿಸಿದೆ. ಹೇಗೆ ಹೇಳಬೇಕೋ ಗೊತ್ತಾಗಲಿಲ್ಲ. ತಲೆ ಎತ್ತಿದೆ. ಅವನ ಮುಖದಲ್ಲಿ ಅರಳಿದ್ದ ಸಂತೋಷದ ಅಲೆಯಲ್ಲಿ ತೇಲಿ ಹೋದ ನಾನು ಮತ್ತೆ ಏನನ್ನೂ ಹೇಳಬೇಕಾದ ಅಗತ್ಯವಿರಲಿಲ್ಲ.

ಮರುಕ್ಷಣ 'ಓ... ನೋ...' ಎನ್ನುವ ನೋವು ಹೊರಟಿತು ಅವನ ಬಾಯಿಂದ.

'ಏನಾಯಿತು?' ಎಂದೆ ಆತಂಕದಿಂದ.

'ನಾಡಿದ್ದು ಲಲ್ಲೀನ ಕರೆದುಕೊಂಡು ಬರಲು ಹೋಗಬೇಕು. ಒಂದು ತಿಂಗಳು ಸ್ಕೂಲಿಗೆ ರಜೆಯಂತೆ. ಬೋರ್ಡಿಂಗ್‌ನ ಕೂಡಾ ಮುಚ್ತಾರಂತೆ. ಅವರ ಪ್ರಿನ್ಸಿಪಾಲ್ ಫೋನ್ ಮಾಡಿದ್ರು ಬಂದು ಕರೆದುಕೊಂಡು ಹೋಗಿ ಅಂತ.' ಅವನ ಮುಖದಲ್ಲಿ ನಿರಾಸೆ, ದುಃಖ ನೋಡಿ ನನ್ನ ನಿರಾಸೆ ಹಿಂದೆ ಬಿತ್ತು. ಏನೂ ಮಾತಾಡದೆ ಎದ್ದು ಬಂದೆ.

ಹೋದಾಗ ಇದ್ದ ಸಂಭ್ರಮದಷ್ಟೇ ದುಗುಡ ಹೊತ್ತು ಮನೆಗೆ ಹಿಂದಿರುಗಿದೆ. ದಿನಕರ ಆಗಲೇ ಬಂದಿದ್ದ. ಏನೂ ಮಾತಾಡದೆ ಬಟ್ಟೆ ಬದಲಿಸಿ ಕೈ ಕಾಲು ತೊಳೆದು ಅಡಿಗೆ ಮನೆ ಸೇರಿದೆ. ಮಂಜು ಕಣ್ಣಲ್ಲಿ ಚಪಾತಿ ಹಿಟ್ಟು ಕಲೆಸಿದೆ. ಈರುಳ್ಳಿ ಕತ್ತರಿಸುವಾಗ ಧಾರಾಳವಾಗಿ ಅತ್ತೆ. ಅರ್ಧ ಗಂಟೆಯಲ್ಲಿ ಗೊಜ್ಜು ಚಪಾತಿ ಮಾಡಿ ಮುಖ ತೊಳೆದು ಬಂದು ತಟ್ಟೆ ಹಾಕಿದೆ. ಎಂದಿನಂತೆ ಮೌನವಾಗಿ ಊಟ ಸಾಗಿತು. ಪುಟ್ಟ ರೇಡಿಯೋದಲ್ಲಿ ಯಾವುದೋ ಮ್ಯಾಚಿನ ಕಾಮೆಂಟರಿ ಕೇಳಿ ಬರುತ್ತಿತ್ತು. ಇದ್ದಕ್ಕಿದ್ದಂತೆ ಮೌನ ಭೇದಿಸಿ 'ನಾಡಿದ್ದು ಮಡಿಕೇರಿಗೆ ಹೋಗೋಣವಾ?' ಎಂದ ದಿನಕರ.

ನಾನು ಬೆಚ್ಚಿದೆ. 'ಏ–ಏನು?' ತಬ್ಬಿಬ್ಬಾಗಿ ಕೇಳಿದೆ. ಪ್ರಶ್ನೆ ಮತ್ತೆ ಉಚ್ಚರಿಸಿದ ದಿನಕರ. ಏನೂ ತೋಚದೆ 'ಯಾ–ಯಾಕೆ?' ಎಂದೆ.

'ಅಲ್ಲೆನೋ ಸಮ್ಮೇಳನ ಇದೆಯಂತಲ್ಲ. ನಿನಗೆ ಹೋಗೋ ಆಸೆ ಇದೆಯೇನೋ ಅಂತ.'

ನನಗೆ ನಂಬಲು ಆಗಲೇ ಇಲ್ಲ. ನಂತರ ತಲೆ ತಗ್ಗಿಸಿ 'ಇಲ್ಲ ನನಗೇನೂ ಇಷ್ಟವಿಲ್ಲ. ನಾನು ಹೋಗುವುದಿಲ್ಲ' ಎಂದೆ.

'ನನಗೇನೋ ಹೋಗೋಣಾ ಅಂತ.'

ಅವನ ಧ್ವನಿಯಲ್ಲಿ ಏನೋ ಕಂಪನವಿತ್ತು, ತಲೆ ಎತ್ತಿ ನೋಡಿದೆ. ಒಂದು ಕ್ಷಣ ನೋಟ ಬೆರೆಯಿತು. ನನಗೆ ಗೊತ್ತಾಯಿತು. ಅವನಿಗೆ ಗೊತ್ತಿತ್ತು. ತುಮುಲದ ಕೊನೆಯ ಹಂತದಲ್ಲಿ ತನ್ನ ಕೋಟೆ ಒಡೆದು ಹೊರ ಬಂದಿದ್ದ ದಿನಕರ ನನ್ನನ್ನು ಕಳೆದುಕೊಳ್ಳಲಾರದೆ ಬೆಳಕಿಗೆ ಬಂದು ಕಣ್ಣು ಬಿಡುತ್ತಿದ್ದ. ಕರಗಿ ಹೋದೆ ನಾನು. ಜೊತೆಗೇ ಇದನ್ನು ಸಾಧ್ಯವಾಗಿಸಿದ ಆ ಸುಂದರ ಅನುಭವದ ಸತ್ಯವನ್ನೂ ಅರಗಿಸಿಕೊಳ್ಳತೊಡಗಿದೆ.

✿